ಅಧ್ಯಕ್ಷರು.—ಇವತ್ತು ಕಡೇ ದಿವಸ. ನಾವೆಲ್ಲಾ ನಗುತ್ತಾ ಹೋಗೋಣ. ಇವತ್ತು ಸದನದ ಸಮಿತಿಗಳನ್ನು, ಮತ್ತೊಂದು ಸದನದ ಸಮಿತಿಯನ್ನು ಫಾರಂ ಮಾಡಬೇಕಾಗಿದೆ.

(ಗೊಂದಲ)

೯–೩೦ ಎ. ಎಂ.

ವರದಿಗಳನ್ನೊಪ್ಪಿಸುವುದು

ಅಧ್ಯಕ್ಷರು.—''ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಹನ್ನೊಂದನೆ ವರದಿಯನ್ನು'' ಶ್ರೀ ಬಿ. ಆರ್. ಯಾವಗಲ್ (ಉಪಾಧ್ಯಕ್ಷರು)ಅವರ ಪರವಾಗಿ ನಾನು ಮಂಡಿಸುತ್ತೇನೆ

ವಸತಿ ಸಮಿತಿಯ ಹನೇ ವರದಿಯನ್ನು ಸಹ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಕೆ. ಮಲ್ಲಪ್ಪ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ).—ಮಾನ್ಯ ಅಧ್ಯಕ್ಷರೆ, ''ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಹತ್ತನೇ ವರದಿಯನ್ನು ಸಭೆಗ ಒಪ್ಪಿಸುತ್ತೇನೆ.

ಶ್ರೀ ಜೆ. ಎ. ಫರ್ನಾಂಡೀಸ್ (ಅಧ್ಯಕ್ಷರು, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿ).—ಮಾನ್ಯ ಅಧ್ಯಕ್ಷರೆ, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿಯ ಏಳನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಮಂಡಿಸಲಾಯಿತು. *

ಶಾಸನ ರಚನೆ ಕಾರ್ಯಕಲಾಪಗಳು

೧೯೮೯ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ, ''೧೯೮೯ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು'' ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೯ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾಪಕ್ಕೆ ಅನುಮತಿ ನೀಡಲಾಯಿತು.

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ, ''೧೯೮೯ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು'' ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಪ್ರಕಟಣೆ

ಜಮಖಂಡಿ ತಾಲ್ಲೂಕಿನ ಸವಳಗಿ ಗ್ರಾಮದಲ್ಲಿ ದಲಿತರ ಮೇಲೆ ನಡೆದ ಗೋಲಿಬಾರ್ ಪ್ರಕರಣದ ವಿಚಾರಣೆಗೆ ಸದನದ ಸಮಿತಿ ನೇಮಕ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

''ಜಮಖಂಡಿ ತಾಲ್ಲೂಕು ಸಾವಳಗಿ ಗ್ರಾಮದ ತಂಡು ಜಮೀನಿನ ವಿವಾದ, ದಲಿತರು ಹಾಗೂ ಮುಂದುವರೆದ ಜನರ ಜಗಳ ಹಾಗದ ಪೋಲೀಸ್ ಗೋಲೀಬಾರ್ ಪ್ರಕರಣಕ್ಕೆ

* Annexure 1

ಸಂಬಂಧಿಸಿದ ವಿಷಯವನ್ನು ಪರಿಶೀಲಿಸಿ ೧೯೮೯ನೇ ಏಪ್ರಿಲ್ ೩೦ರೊಳಗಾಗಿ ವರದಿಯನ್ನು ಒಪ್ಪಿಸಲು ಕೆಳಕಂಡ ಸದಸ್ಯರನ್ನೊಳಗೊಂಡ ಸದನದ ಸಮಿತಿಯನ್ನು ರಚಿಸಲು ಈ ಸದನವು ನಿರ್ಣಯಿಸುತ್ತದೆ.''

ಶ್ರೀಯುತರುಗಳಾದ :

೧	ಪಿ. ಜಿ. ಆರ್. ಸಿಂಧ್ಯ ಸಮಾಜ ಕಲ್ಯಾಣ ಸಚಿವರು	...	ಅಧ್ಯಕ್ಷರು
೨	ಬಿ. ಎನ್. ಜಾಸ್ಕರಪ್ಪ	...	ಸದಸ್ಯರು
೩	ಜ್ಞಾನದೇವ ದೊಡ್ಡಮೇಟಿ	...	,,
೪	ಹೆಚ್. ಸಿ. ಮಹಾದೇವಪ್ಪ	...	,,
೫	ಶ್ರೀಮತಿ ಶಕುಂತಲಾ ಟಿ. ಚೌಗುಲೆ	...	,,
೬	ಆಗಡಿ ವಿರೂಪಾಕ್ಷಪ್ಪ	...	,,
೭	ಡಿ. ಜಿ. ಬಕವನಗೌಡ	...	,,
೮	ಜಿ. ಮಾದೇಗೌಡ	...	,,
೯	ಬಿ. ಎಂ. ಇದಿನಬ್ಬ	...	,,
೧೦	ಎಂ. ಪಿ. ಕೇಶವಮೂರ್ತಿ	...	,,
೧೧	ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್	...	,,
೧೨	ಎಂ. ಎಸ್. ನಾರಾಯಣ ರಾವ್	...	,,
೧೩	ವಿಶ್ವನಾಥ ಪಾಟೀಲ ಹೆಬ್ಬಾಳ	...	,,
೧೪	ಪಂಪಾಪತಿ	...	,,
೧೫	ಆರ್. ವೆಂಕಟರಾಮಯ್ಯ	...	,,
೧೬	ಬಿ. ಎಸ್. ಯಡಿಯೂರಪ್ಪ	...	,,
೧೭	ಚಂದ್ರಕಾಂತ ಜಿ. ಬಿಲ್ಲದ್	...	,,

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

ಶ್ರೀ ಜಿ. ಎಂ. ಕಾನಡೆ.—ಮಾನ್ಯ ಅಧ್ಯಕ್ಷರೇ, ಎರಡು ಮಂದಿ ಪೆಡ್ಯೂಲ್ಡ್ ಕಾಸ್ಟ್‌ನವರನ್ನು ಹಾಕಿ ಉಳಿದವರನ್ನು ಬೇರೆಯವರನ್ನು ಹಾಕಿದ್ದೀರಿ. ನಾಲ್ಕೈದು ಮಂದಿ ಪೆಡ್ಯೂಲ್ಡ್ ಕಾಸ್ಟ್‌ನವರನ್ನು ಹಾಕಿ.

ಅಧ್ಯಕ್ಷರು —ಹಾಕಿದ್ದೇವೆ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಪಟಮಕ್ಕಿ ರತ್ನಾಕರ್ —ದಯವಿಟ್ಟು ತಾವು ಈ ವಿಚಾರವನ್ನು ಪರಿಗಣಿಸಬೇಕು. ಪೆಡ್ಯೂಲ್ಡ್ ಕಾಸ್ಟ್‌ನವರನ್ನು ಜಾಸ್ತಿ ಹಾಕಿ.

ಶ್ರೀ ಜಿ. ಎಂ. ಕಾನಡೆ —ನೀವು ಹೆಸರಿಗೆ ಮಾತ್ರ ಸಮಿತಿಯನ್ನು ಮಾಡಿದ್ದೀರಿ. ಇನ್ನೇನೂ ಆಗಿಲ್ಲ.

ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ಅಧ್ಯಕ್ಷರು.—ಈಗ ನಿಯಮ ೬೮ರ ಪ್ರಕಾರ ಚರ್ಚೆಗೆ ತೆಗೆದುಕೊಳ್ಳೋಣ.

ಗೃಹ ನಿರ್ಮಾಣ ಸಹಕಾರಿ ಸಂಘಗಳಲ್ಲಿ ಭ್ರಷ್ಟಾಚಾರ ನಡೆಯುವ ಬಗ್ಗೆ ವಿಚಾರಣೆ ಮಾಡಲು ನೇಮಿಸಿದ ಶ್ರೀ ಜಿ. ವಿ. ಕೆ. ರಾವ್ ಸಮಿತಿ ವರದಿಯನ್ನು ಕುರಿತು.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತೇನೆ. ಏನೆಂದರೆ ಮೊನ್ನೆ ದಿನ ನಾನು ದಾ: ಜೀವರಾಜ ಆಳ್ವರವರ ವಿಷಯದಲ್ಲಿ ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿ